

ಶ್ರೀ. ಪ.ವಿ.ವ.ಸಂ.ಸಾ



# ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಮತ್ತು ವ್ಹಿ.ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ

ಸಿಂದಗಿ – 586128

೨೦೨೨-೨೦೨೩

09/10

ತಾ॥ಸಿಂದಗಿ

ಜಿಲ್ಲಾ॥ವಿಜಯಪುರ

## ಕನ್ನಡ ವಿಭಾಗ

## ವಿದ್ಯಾರ್ಥಿಯ ಪ್ರಾಯೋಜಿತ ಕಾರ್ಯ

# ರತ್ನತ್ರಯರು

ಮಾರ್ಗದರ್ಶಕರು
ಪ್ರೊ – ಪ್ರತಿಕಾ. ಎಮ್. ತಳವಾರ (ಎಂ.ಎ, ಎಂ.ಎಡ್)

ಇವರಿಂದ,
ಸಚಿನ ಬಿರಾದಾರ
B.A.I sem
Reg no : U15NB22A0101
ಸ್ಥಳ : ನಾಗಾವಿ ಬಿ. ಕೆ.
ತಾ॥ ಸಿಂದಗಿ ಜಿ॥ ವಿಜಯಪುರ

Co-ordinator IQAC
G.P. Porwal Arts, Comm & V.V. Salimath Science College, Sindgi-586128. Dist. Vijayapur

Principal,
G. P. Porwal Arts, Comm &
V. V. Salimath Sc. College
SINDGI-586128. College Code: 5



S.P.V.V.S.S



G.P.PORWAL ARTS, COMMERCE & V.V. SALIMATH SCIENCE COLLEGE

SINDAGI - 586128

2022-2023

Tq :Sindagi Dist :Vijayapur

# Dept, of Kannada

## Student Project Work On

## Ratnatrayaru


**Guided By,**

*Prof - Pratika M. Talawar ( M.A. M.Ed )*

**Submitted By,**

*Sachin Biradar*
*B.A. I sem*
*Reg No : U15NB22A0101*
*Village : Nagavi B.K.*
*Tq : Sindagi Dist : Vijayapura*

Principal,
G. P. Porwal Arts, Comm &
V. V. Salimath Sc. College



# ಃ ರತ್ನತ್ರಯರು ಃ

ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ
ಇತಿಹಾಸವನ್ನು ಗುರುತಿಸಲು ಹಲ್ಮಿಡಿ ಶಾಸನ ಹೇಳೆ
ಮೊದಲೇ ಹಾಗೆಯೇ ಕನ್ನಡದ ಕವಿಕಳು ಎಂದು
ಪಂಪ, ಪೊನ್ನ, ರನ್ನರು ಮತ್ತು ಅವರ ಕೃತಿಗಳು
ಮೊದಲು. ಇವರು ಸರಿಸುಮಾರು 10ನೇ ಶತಮಾನದ
-ವರು. ಇವರು ಹಲವಾರು ಕೃತಿ, ಕಾವ್ಯಗಳನ್ನು ರಚಿಸಿದ್ದಾ
-ರೆ. ಇವರುಗಳೆಲ್ಲರು ರಾಜಾಶ್ರಯದಲ್ಲಿದ್ದ ಸಾಹಿತ್ಯ
-ವನ್ನು ರಚಿಸಿದ್ದಾರೆ. ಮೊದಲ ಬಾರಿಗೆ ಪಂಪ, ರನ್ನ
ಪೊನ್ನ [illegible] ಕವಿಜನದೊಳ್ ರತ್ನತ್ರಯ. ಪವಿತ್ರಮೆನೆ
ನೆಗಳ್ದ ಪಂಪನುಂ ಪೊನ್ನಿಗನುಂ ಕವಿರನ್ನನುಮೀ
ಮೂವರ್ ಕವಿಗಳ್ ಜಿನಸಮಯ ದೀಪಕರ್ ಪೇೞರೊಳರ್
ಎಂದು ಹೇಳಿದವನು ರನ್ನ.


ಇವರೆಲ್ಲರೂ ಜೈನ ಧರ್ಮದ
ಬೆಳವಣಿಗೆಗೆ ಹೆಚ್ಚು ಒತ್ತುಕೊಟ್ಟರು. ಆದ್ದರಿಂದಲೆ
ರನ್ನನು ಜೈನ ಸಮುದಾಯದ ದೀಪಕರು ನಾವು
ಎಂದು ಹೇಳಿಕೊಂಡಿರುವುದು ಸೂಕ್ತವಾಗಿದೆ. ಎರಡರ
ಮೂವರಲ್ಲೂ ತಾವು ಬರೆದಿರುವ ಕೃತಿಗಳ ಬಗ್ಗೆ
ಹೆಮ್ಮೆ ಇದೆ. ಸಂಸ್ಕೃತದ ಕೃತಿಗಳನ್ನು ಆಧಾರವಾಗಿ
ಇಟ್ಟುಕೊಂಡಿದ್ದರು ಅವರದೇ ಆದ ಅನುಭವ ಶೈಲಿಯು
ಸ್ವತಂತ್ರತೆಯನ್ನು ತೋರಿಸಿದ್ದಾರೆ. ಪಂಪನು "ಕವಿತೆ
ನೆಗಳ್ತೆಯುಂ ನಿಱಿಸೆ ಪೇಳ್ದ ಪಾಟಿ ನಿಬಂಧಿ ನಾಥ
-ನಾಶ್ರಯದೊಳ್ ರಾತಿನಾಯಕರ ಪಟ್ಟನೆ ಪಾಡಿಸೆ.....
ವಂ ಕಲಿಯೋ ಸತ್ಯವಿಂಯೋ ಕವಿತಾ ಗುಣಾರ್ಣವಂ
ಎಂದೂ,

ಪೊನ್ನನು "ಪ್ರಸನಂಗೆ ನಮ್ಮರಬಿ" ಹಾಗೂ "ಸಕ್ಕದದೊಳ್ ಮುನ್ನಳ್ಳ ಕಾಳಿದಾಸಂಗಂ ನಾಲ್ಮಡಿ ರಚನೆಯಿಂದೊಳ್ ಕುರುಳ್ಗಳ್ ಸವಣರ್" ಎಂದು ತಮ್ಮನ್ನು ತಾವು ಹೊಗಳಿಕೊಂಡಿದ್ದಾರೆ. ಈ ಮೂವರಲ್ಲಿ ಪಂಪ ತನ್ನ ವೈಯಕ್ತಿಕ ವಿಚಾರವನ್ನು ಹೇಳಿಲ್ಲ. ಹಾಗೂ ಕವಿಚಕ್ರವರ್ತಿ ಬಿರುದಿಲ್ಲ ಕಾರಣ ಇವನ ಆಶ್ರಯದಾತ ಚಾಲುಕ್ಯ ರಾಜ ಅರಿಕೇಸರಿ ಸಾಮಂತ ರಾಜನಾಗಿದ್ದರಿಂದ. ಪಂಪ ಕವಿ ಕವಿ ಎರಡೂ ಹಾದು. ಆಶ್ರಯದಾತ ಅರಿಕೇಸರಿಯನ್ನು ವಿಕ್ರಮಾರ್ಜುನ ವಿಜಯದಲ್ಲಿ ಅರ್ಜುನನಿಗೆ ಸಮೀಕರಿಸಿದರೂ ಕರ್ಣನನ್ನು ನೆನೆ ಎಂದಿರುವುದು ಆಶ್ಚರ್ಯ. ಪೊನ್ನನು ಸಹ ತನ್ನ ಭುವನೈಕ ರಾಮಾಭ್ಯುದವನ್ನು ರಾಷ್ಟ್ರಕೂಟ ದೊರೆ ಕೃಷ್ಣನಿಗೆ ಸಮೀಕರಿಸಿ ಬರೆದಿರಬಹುದು ಎನಿಸುತ್ತದೆ. ಕೃಷ್ಣನೆ ಪೊನ್ನನಿಗೆ ಉಭಯಕವಿ ಚಕ್ರವರ್ತಿ ಎಂಬ ಬಿರುದನ್ನು ನೀಡಿದ್ದಾನೆ.


ಹಾಗೆಯೇ ರನ್ನನು ಸಹ ಗದಾಯುದ್ಧದಲ್ಲಿ ಸತ್ಯಾಶ್ರಯನನ್ನು ಭೀಮನಿಗೆ ಸಮೀಕರಿಸಿ ಬರೆದಿದ್ದಾನೆ. ಸಾಹಸ ಭೀಮ ವಿಜಯವು ಇದನೆ ಹೇಳಿರುವ "ಬಿಳಿ ಪೊರ್ಕ್ಕ ನೋಟೆ ಭಾರತದೊಳಗಣ ಕಥೆಯೆಲ್ಲಮೀ ಗದಾಯುದ್ಧದೊಳಂ ತೋಳ್ಕೊಂಡಿತ್ತೆನೆ ಸಿಂಹಾವಲೋಕನ ಕ್ರಮದಿನ ಈ ವಿದಂ ಕವಿರತ್ನಂ" ಈಗೆ ಸಿಂಹಾವಲೋಕನ ಕ್ರಮದಲ್ಲಿದ್ದು ನಾಟಕೀಯ ಶೈಲಿಯಲ್ಲಿದೆ. ರನ್ನನಿಗೂ ಕವಿರತ್ನ, ಕವಿಚಕ್ರವರ್ತಿ, ಕವಿಜನ, ಉಭಯ ಕವಿ ಎಂಬ ಹಲವಾರು ಬಿರುದುಗಳಿವೆ.

ಒಬ್ಬೊಬ್ಬರಂತಗಿದ ತಿಳಿಸುವುದೇನೆಂದರೆ
ಇವರೆಲ್ಲರೂ ಒಬ್ಬರಿಗಿಂತ ಒಬ್ಬರು ಭಿನ್ನವಾಗಿ
ಕೃತಿಗಳನ್ನು ರಚಿಸಿದ್ದಾರೆ. ಆದ್ದರಿಂದಲೇ ಇವರನ್ನು
ರತ್ನತ್ರಯರು ಎಂದು ಕರೆಯುವರು. ಮೂವರ
ಕೃತಿಗಳು ಕೊನೆಗೆ ಹೇಳುವುದೇನೆಂದರೆ "ತ್ಯಾಗ".
ಯುದ್ಧದಿಂದ ಆಗುವ ನಷ್ಟ. ನೋವು. ಭೋಗದಿಂದ
ಆಗುವ ಬೆಗುತ್ಸ ಇವೆಲ್ಲ ಮೀರಿದ ವೈರಾಗ್ಯವ
-ನ್ನು ಇವು ಬೋಧಿಸುತ್ತವೆ. ಹಾಗಾದರೆ ರತ್ನತ್ರಯ
-ರಾದ ಪಂಪ, ರನ್ನ, ಪೊನ್ನ, ರುಗಳ ಜೀವನ,
ಕೃತಿಗಳ ಬಗ್ಗೆ ಸಹ ವಿವರವಾಗಿ ತಿಳಿದುಕೊಳ್ಳೋ
-ಣ.

— ರತ್ನತ್ರಯರು.



ಪಂಪ



ರನ್ನ


ಪೊನ್ನ

Principal,
G. P. Porwal Arts, Comm &
V. V. Salimath Sc. College
SINDGI-586128. College Code.

# ① "ಪಂಪ" ⇒ ಕವಿ ಪರಿಚಯ

***ಪೀಠಿಕೆ ⇒** ಕನ್ನಡದ ಆದಿಕವಿ, ಕನ್ನಡದ ಕಾಳಿದಾಸ, ಕನ್ನಡ ಕಾವ್ಯದ ಪಿತಾಮಹ ಎಂದೇ ಪ್ರಸಿದ್ಧಿ ಆಗಿರುವ ಪಂಪನು. 10ನೇ ಶತಮಾನದ ಕವಿ. ಪಂಪನು ಕ್ರಿ.ಶ. 902. ದುಂದುಭಿನಾಮ ಸಂವತ್ಸರದಲ್ಲಿ ಜನಿಸಿದನು. ಆಂಧ್ರಪ್ರದೇಶದ ವೆಂಗಿಮಂಡಲದ ವೆಂಗಿಪಳು ಅಂದರೆ ಈಗಿನ ಧಾರವಾಡ ಜಿಲ್ಲೆಯ ಅಣ್ಣಿಗೇರಿಯಲ್ಲಿ ಹುಟ್ಟಿದರು. ತಂದೆ ಭೀಮಪ್ಪಯ್ಯ ಮತ್ತು ತಾಯಿ ಅಬ್ಬಣಬ್ಬೆ. (ಗದಗ ಜಿಲ್ಲೆ) ಇವರ ತಂದೆ ಕ್ರಿ.ಶ ಸುಮಾರು ೯೩೩ - ೯೫೫ ರ ವರೆಗೆ ಆಳಿದ ವೇಮುಲವಾಡ ಚಾಲುಕ್ಯವಂಶದ ಅರಸು ಇಮ್ಮಡಿ ಅರಿಕೇಸರಿಯ ಆಶ್ರಯದಲ್ಲಿದ್ದ.

ಪಂಪನ ಪೂರ್ವಜರು ವೆಂಗಿ ಮಂಡಲದವರು. ವೆಂಗಿಮಂಡಲವು ಕೃಷ್ಣಾ ಮತ್ತು ಗೋದಾವರಿ ನದಿಗಳ ನಡುವೆ ಇದ್ದ ಪ್ರದೇಶ. ಇದರಲ್ಲಿದ್ದ 7 ಗ್ರಾಮಗಳಲ್ಲಿ ವೆಂಗಿಪಳು ಎಂಬುದು ಪ್ರಸಿದ್ಧ ಅಗ್ರಹಾರ. ಅಲ್ಲಿದ್ದ ಜಮದಗ್ನಿ ಪಂಚಾರ್ಷೇಯ ಪ್ರವರದ ಶ್ರೀವತ್ಸ ಗೋತ್ರಕ್ಕೆ ಸೇರಿದ ಕುಟುಂಬಕ್ಕೆ ಸೇರಿದವನು ಪಂಪ.

ಮಾಧವ ಸೋಮಯಾಜಿ ಎಂಬಾತನನ್ನ ಪಂಪನ ಮನೆತನದ ಹಿರಿಯನೆಂದು ಗುರುತಿಸಲಾಗಿದೆ. ಈತ ಪಂಪನ ಮುತ್ತಜ್ಜನ ತಂದೆ. ಮಾಧವ ಸೋಮಯಾಜಿಯ ಮಗ ಅಭಿಮಾನ ಚಂದ್ರ. ಈತ ಈಗಿನ ಗುಂಟೂರು ಸಮೀಪದ ಗುಂಡಿಕಟ್ಟಕ್ಕೆ ಸೇರಿದ ನಿಡುಗುಂದಿ ಎಂಬ ಅಗ್ರಹಾರದಲ್ಲಿದ್ದ. ಈತ ಪಂಪನ ಮುತ್ತಜ್ಜ.

ಅಭಿಮಾನ ಚಂದ್ರನ ಮಗ ಕೋಮರಯ್ಯ. ಈತನ ಕಾಲದಲ್ಲಿ ಈ ಕುಟುಂಬದವರು ಬನವಾಸೆ, ಅಂದರೆ ಕರ್ನಾಟಕದ ಉತ್ತರ ಕನ್ನಡ ಪ್ರದೇಶಕ್ಕೆ ವಲಸೆ ಬಂದರು. ಕೋಮರಯ್ಯ ಪಂಪನ ಅಜ್ಜ. ಅವನ ಮಗ ಭೀಮಪ್ಪಯ್ಯ. ಭೀಮಪ್ಪಯ್ಯನ ಮಗ ಪಂಪ. ಜಿನವಲ್ಲಭ ಪಂಪನ ತಮ್ಮ.

ಪಂಪನ ತಂದೆ ಭೀಮಪ್ಪಯ್ಯ ಯಜ್ಞ ಯಾಗಾದಿಗಳಲ್ಲಿನ ಹಿಂಸೆಯನ್ನು ವಿರೋಧಿಸಿದ. ಜೈನ ಮತವನ್ನು ಸ್ವೀಕರಿಸಿದನು. ದೇವೇಂದ್ರ ಮುನಿ ಎಂಬಾತ ಪಂಪನ ಗುರು. ಪಂಪನು ರತ್ನತ್ರಯರಲ್ಲಿ ಒಬ್ಬನಾಗಿದ್ದಾನೆ. ಇವನು ಕೃತಿಗಳನ್ನು ಚಂಪೂ ಶೈಲಿಯಲ್ಲಿ ರಚಿಸಿದ್ದಾನೆ. ಪಂಪನನ್ನು ಯುಗ ಪ್ರವರ್ತಕನೆಂದು ಗುರುತಿಸಿ ಕನ್ನಡಿಗರು ಗೌರವಿಸಿ ಇವನ ಕಾಲವನ್ನು "ಪಂಪಯುಗ" ಎಂದು ಕರೆದಿದ್ದಾರೆ. ಇವರು ಗಣಿತ, ವ್ಯಾಕರಣ, ಅಲಂಕಾರ, ಸಂಗೀತ, ನಾಟ್ಯ, ಶಿಲ್ಪ, ವೈದ್ಯ, ವೇದಶಾಸ್ತ್ರವನ್ನು ಗುರುಕುಲದಲ್ಲಿ ಮಾಡಿದ್ದಾರೆ.

ಪಂಪನಿಗೆ ಹಲವಾರು ಪ್ರಶಸ್ತಿ, ಪುರಸ್ಕಾರ, ಬಿರುದುಗಳಿವೆ.

* ಸಂಸಾರ ಸಾರೋದಯ
* ಸರಸ್ವತೀ ಮಣಿಹಾರ,
* ಕವಿತಾಗುಣಾರ್ಣವ
* ಆದಿಕವಿ
* ಕನ್ನಡ ಕಾವ್ಯಗಳ ಜನಕ,
* ನಾಡೋಜ
* ನೂತನ ಯುಗ ಪ್ರವರ್ತಕ.


## * ಪಂಪನ ಸಾಹಿತ್ಯ ಕೃತಿಗಳು

ಪಂಪನು ಮುಖ್ಯವಾಗಿ ಎರಡು ಕೃತಿಗಳನ್ನು ರಚಿಸಿದ್ದಾನೆ. ಅವುಗಳೆಂದರೆ.

1) ಆದಿಪುರಾಣ
2) ವಿಕ್ರಮಾರ್ಜುನ ವಿಜಯ.


### ① ಆದಿಪುರಾಣ


ಮೊದಲನೆಯ ತೀರ್ಥಂಕರನಾದ ಪುರುದೇವ/ವೃಷಭದೇವನ ಬಗ್ಗೆ ರಚಿತವಾದ ಜೈನ ಕಾವ್ಯ. ಜಿನಸೇನಾಚಾರ್ಯರ ಸಂಸ್ಕೃತ ಕಾವ್ಯ. ಪೂರ್ವ ಪುರಾಣ ಇದರ ಆಕರ ಗ್ರಂಥ. ಇದರಲ್ಲಿ 16 ಆಶ್ವಾಸಗಳು ಮತ್ತು 1555 ಪದ್ಯಗಳಿವೆ.




ಇದರಲ್ಲಿ ಪ್ರಮುಖವಾಗಿ ಆದಿ ತೀರ್ಥಂಕರನಾದ ವೃಷಭದೇವ ಮತ್ತು ಅವನ ಮಕ್ಕಳಾದ ಭರತ ಮತ್ತು ಬಾಹುಬಲಿಗಳ ಪ್ರಸಂಗವು ಚಿತ್ರಿತವಾಗಿದೆ ಹಾಗೂ ಜೈನ ಧರ್ಮದ ವರ್ಣನೆಯ ಜೊತೆಗೆ ಸರ್ವಧರ್ಮದ ಸಮನ್ವಯವನ್ನು ಮೆರೆದಿದ್ದಾನೆ. ಇದು ಚಂಪೂ ಕಾವ್ಯದಲ್ಲಿದೆ. ಪಂಪನು ಮನುಷ್ಯನ, ಮನುಷ್ಯನು, ಈ ಲೋಕದ ಸುಖ-ಸಂಪತ್ತುಗಳನ್ನು ಬಿಟ್ಟು ವೈರಾಗ್ಯದ ಹಾದಿಯನ್ನು ಹಿಡಿವರೆಗಿನ ನಿಲುವಿಗೆ ಬರುವುದೆಂಬುದನ್ನು ಪಂಪ ಆದಿಪುರಾಣದಲ್ಲಿ ಚಿತ್ರಿಸಿದ್ದಾನೆ.

## ② ವಿಕ್ರಮಾರ್ಜುನ ವಿಜಯ (ಪಂಪ ಭಾರತ).





ವಿಕ್ರಮಾರ್ಜುನ ವಿಜಯವು ಪಂಪ ಭಾರತವೆಂದೇ ಪ್ರಸಿದ್ಧಿ. ಈ ಕೃತಿಯನ್ನು ಪಂಪನು ಆರು ತಿಂಗಳಿನಲ್ಲಿ ಬರೆದು ಮುಗಿಸಿದೆನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಈ ಕೃತಿಯಲ್ಲಿ ಲೌಕಿಕವನ್ನು ಅಂದರೆ ಲೋಕದ ವ್ಯಾಪಾರ ವ್ಯವಹಾರವನ್ನು, ನಂತರ ಗುಣ ಗರಿಮೆಗಳನ್ನು ತಿಳಿದುಕೊಳ್ಳಬಹುದೆನ್ನುತ್ತಾನೆ ಪಂಪ. ಇದರಲ್ಲಿ 14 ಆಶ್ವಾಸಗಳಿವೆ. ಮತ್ತು 1609 ಪದ್ಯಗಳ ಪದಗಳಿವೆ. ವ್ಯಾಸ ರಚಿತವಾದ ಮಹಾಭಾರತವನ್ನು ಕನ್ನಡಕ್ಕೆ ತಂದ ಕೀರ್ತಿ ಪಂಪನಿಗೆ ಸಲ್ಲುತ್ತದೆ. ಪಂಪ ಭಾರತದಲ್ಲಿ ಅರ್ಜುನನನ್ನು ಪ್ರಧಾನ ಭೂಮಿಕೆಯಲ್ಲಿ ನಿಲ್ಲಿಸಿ ತನ್ನ ದೊರೆ ಅರಿಕೇಸರಿಗೆ ಹೋಲಿಸಿದ್ದಾನೆ. ಮಹಾಭಾರತದ ಕಾವ್ಯದ ವರ್ಣನೆಯ ಜೊತೆಗೆ ಪಂಪ ತನ್ನ ಕಾಲದ ಸಮಾಜದ ನಾಗರಿಕತೆ ಸಂಪ್ರದಾಯ, ಸಂಸ್ಕೃತಿ ಹಾಗೂ ಜನ ಸಾಮಾನ್ಯರ ಜೀವನದ ಪೂರ್ಣ ಚಿತ್ರಣ ನೀಡಿದ್ದಾನೆ.

Principal,
C. P. Porwal Arts, Com. &
V. V. Salimath Sc. College
SINDGI-586128. College Code: 5234

* ಕವಿ ಸಂದೇಶ :

"ಧರ್ಮಂ ಪ್ರಧಾನಂ ಅರ್ಥಂ ಧರ್ಮಾಂಘ್ರಿಪಫಲಂ ಅದರ್ಕೆ ರಸಮದು ಕಾಮಂ" - ಇದು ಪಂಪನ ಜೀವನ ದೃಷ್ಟಿ.

ಅರ್ಥ = ಜೀವನಕ್ಕೆ ಮುಖ್ಯವಾದ ಧರ್ಮ, ಅರ್ಥ, ಕಾಮ, ಇವುಗಳಲ್ಲಿ ಧರ್ಮವು ಎಲ್ಲಕ್ಕೂ ಪ್ರಧಾನವು ಎಂದರೆ ಮುಖ್ಯವು, ಅರ್ಥವು ಎಂದರೆ ಸಂಪತ್ತು ಅಥವಾ ಧನವು, ಅದು ಧರ್ಮವೆಂಬ ಮರದ ಫಲವು/ ಹಣ್ಣು: ಆ ಫಲದ ರಸ ಅಥವಾ ಸಾರವೇ ಕಾಮವು ಎಂದರೆ ಅಗತ್ಯ ಬಯಕೆಗಳ ಈಡೇರಿಕೆ. ಧರ್ಮದಿಂದ ಬಯಕೆಗಳನ್ನು ಈಡೇರಿಸಿಕೊಳ್ಳಬೇಕು ಎಂಬುದು ಭಾವ.



* ಬನವಾಸಿಯ ವರ್ಣನೆಯ ಪದ್ಯ

ಕನ್ನಡನಾಡಿನ ಬಗ್ಗೆ ಅಪಾರ ಹೆಮ್ಮೆ
-ಯಿಂದ ತನ್ನ ಕಾವ್ಯದಲ್ಲಿ ಹೊಗಳಿದ್ದಾನೆ. ಪಂಪನ
ಭಾರತ ಕಾವ್ಯದಲ್ಲಿ ಬರುವ ಬನವಾಸಿಯ ವರ್ಣನೆ
-ಯನ್ನು ನೀಡುವುದು ಪದ್ಯಗಳು.

"ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ
ಜಾತಿ ಸಂ.
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ
ನಲ್ಲರೊಳ್ಪುಗಂ.।
ನನೆಮೊಗದೊಳ್ ಪಳಂಚಲೆಯೆ ಕೊಡುವ ನಲ್ಲರೆ
ನೋಳ್ಪೊಡಾವ ದೆ.
ಸೆಗಳೊಳಮಾವ ನಂದನವನಂಗಳೊಳಂ ಬನವಾಸಿ
ದೇಶದೊಳ್ ॥"

ಅರ್ಥ = ಬನವಾಸಿ ದೇಶದ ಯಾವ ಬೆಟ್ಟಗಳಲ್ಲಿಯೂ ಉದ್ಯಾನವನಗಳಲ್ಲಿಯೂ ನೋಡುವುದಾದರೆ ಸೊಗಸಾಗಿ ಫಲ ಬಿಟ್ಟಿರುವ ಮಾವಿನ ಮರಗಳೇ; ದಟ್ಟವಾಗಿ ಸೇರಿಕೊಂಡಿರುವ ಚಿಗುರುವೆಲೆಯ ಬಳ್ಳಿಗಳೇ, ಹೂವನ್ನು ಬಿಟ್ಟಿರುವ ಜಾಜಿ ಮತ್ತು ಸಂಪಿಗೆ ಗಿಡಗಳೇ; ಸುಸ್ವರವಾಗಿ ಧ್ವನಿ ಮಾಡುವ ಕೋಗಿಲೆ, ಝೇಂಕರಿಸುವ ದುಂಬಿಗಳೇ, ಪ್ರೇಯಸಿಯರ ಒಳ್ಳೆಯ ಮುಖಗಳೇ, ನಗುಮುಖದಲ್ಲಿ ಪ್ರತಿಧ್ವನಿ ಕೊಡುವ ನಲ್ಲರೇ.

"ಚಾಗದ ಭೋಗದಕ್ಕರದ ಗೇಯದ
ಗಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ
ಪುಟ್ಟಲೇ।"

– ನಾಗಿಯುಮೇನೊ ತೀರ್ದಪುದೆ ತೀರದೊಡಂ
ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್
ಬನವಾಸಿ ದೇಶದೊಳ್ ॥

ಅರ್ಥ

ಈ ಬನವಾಸಿ ದೇಶದಲ್ಲಿ ತ್ಯಾಗ, ಭೋಗ, ವಿದ್ಯೆ, ಸಂಗೀತ-ಗೋಷ್ಠಿಗಳ ಸಂತೋಷದ ಸೌಖ್ಯಕ್ಕೆ ಆಸರಾಗಿರುವ ಮನುಷ್ಯರೇ ಮನುಷ್ಯರು. ಅಂತಹ ಉತ್ಕೃಷ್ಟಶೀಲಿಗಳಾದ ಮನುಷ್ಯರಾಗಿ ಹುಟ್ಟಲು ಏನಾದರೂ ತಾನೇ ಸಾಧ್ಯವೇ? ಹಾಗೆ ಸಾಧ್ಯವಾಗದಿದ್ದರೂ ಈ ಬನವಾಸಿ ದೇಶದ ನಂದನವನಗಳಲ್ಲಿ ಮರಿದುಂಬಿಯಾಗಿಯೋ ಅಥವಾ ಕೋಗಿಲೆಯಾಗಿಯೋ ಹುಟ್ಟಬೇಕು.

## ② ರನ್ನ = ಕವಿಪರಿಚಯ.

ಜನನ (ಜೀವನ) = (949 - 1020).

ರನ್ನನು ರತ್ನತ್ರಯರಲ್ಲಿ ಒಬ್ಬನಾಗಿದ್ದು 10ನೇ ಶತಮಾನದ ಕವಿ. ಮತ್ತು ಹಳೆಗನ್ನಡದ ಪ್ರಮುಖ ಕವಿ. ಹಾಗೂ ಶಕ್ತಿಕವಿ ಎಂದೇ ಪ್ರಸಿದ್ಧನಾಗಿರುವ ರನ್ನನು ಕ್ರಿ.ಶ 949 ರಲ್ಲಿ ಮುಧೋಳ ಜಿಲ್ಲೆಯ (ಬಾಗಲಕೋಟೆ) ಮುಧೋಳ ತಾಲೂಕಿನ ಬೆಳಗಲಿ ಗ್ರಾಮದಲ್ಲಿ ತಂದೆ ಜಿನವಲ್ಲಭೇಂದ್ರ ಮತ್ತು ತಾಯಿ ಅಬ್ಬಲಬ್ಬೆ ಯವರ ಮಗನಾಗಿ ಜನಿಸಿದರು. ಇವರ ಮನೆ ಬಳೆಗಾರ ಮನೆತನ. ಆ ಕಾಲದ ಪ್ರಸಿದ್ಧ ಗುರುಗಳಾದ ಅಜಿತಸೇನಾಚಾರ್ಯರ ಬಳಿ ರನ್ನನ ವಿದ್ಯಾಭ್ಯಾಸ. ಆಯಿತು. ರನ್ನನ ಆಶ್ರಯದಾತರು ಗಂಗರು ಮತ್ತು ಚಾಲುಕ್ಯರು ಆಗಿದ್ದಾರೆ. ರನ್ನನ ಹೆಂಡತಿ ಶಾಂತಿಯಬ್ಬೆ ಮತ್ತು ಜಕ್ಕಿಯಬ್ಬೆ ಆಗಿದ್ದರು. ಇವರ ಮಕ್ಕಳು ರಾಯ ಮತ್ತು ಅತ್ತಿಮಬ್ಬೆ. ರನ್ನನು 5 ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ 3 ಕೃತಿಗಳು ಮಾತ್ರ ಲಭ್ಯವಿದೆ.

ರನ್ನ ಜೈನ ಧರ್ಮೀಯನಾದರೂ ವೈಶ್ಯ ಪಂಗಡದವನೆಂದು ಹೇಳಲಾಗಿದೆ. ಕವಿ ತನ್ನ ಕಾವ್ಯಗಳಲ್ಲಿ ಪ್ರಸ್ತುತ ಬಳೆಗಾರ ಕುಲದವನೆಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ.

—ರನ್ನನ ಪ್ರೋಷಕರಲ್ಲಿ ಚಾವುಂಡರಾಯ, ತೈಲಪರಂತೆಯೇ ಅತ್ತಿಮಬ್ಬೆಯೂ ಮುಖ್ಯಳಾಗಿದ್ದಾಳೆ. ಚಕ್ರವರ್ತಿಗಳಲ್ಲಿ ತೈಲಪ ಶ್ರೇಷ್ಠನಾಗಿರುವಂತೆ ದಾನದಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆ ಹಾಗೆ ಎಂಬುದು ಕವಿಯ ಹೇಳಿಕೆ. ರನ್ನನಿಂದ ಅಜಿತಪುರಾಣವನ್ನು ಹೇಳಿಸಿದವಳು ಅತ್ತಿಮಬ್ಬೆ. ಆದಿಪುರಾಣ, ಶಾಂತಿಪುರಾಣಗಳಿಗೆ ಸಮಾನವಾದ ಈ ಕೃತಿಯನ್ನು "ಅಜಿತ ಚಿಂತಾಮಣಿಗತ್ತಿಮಬ್ಬೆಗರೆದಾಯ ಪೇಳ್ದಂ ಎಂದಿದ್ದಾನೆ ಕವಿ. ಆದರಿಂದ ಅತ್ತಿಮಬ್ಬೆ ಪರವಾಗಿರುವ ಆತನ ಗೌರವ ವ್ಯಕ್ತವಾಗುತ್ತದೆ. ಕವಿ ತಾನು ಸೌಮ್ಯ ಸಂವತ್ಸರದಲ್ಲಿ ಹುಟ್ಟಿದವನೆಂದು ಹೇಳಿಕೊಂಡಿದ್ದಾನೆ. ಅದು 949 ಆಗುತ್ತದೆ. ಆದ್ದರಿಂದ ರನ್ನ ಹುಟ್ಟಿದ್ದು 949 ರಲ್ಲಿ ಎನ್ನುವುದು ಉಚಿತ. ರನ್ನನ ಕಾಲವನ್ನು ಸಾಮಾನ್ಯವಾಗಿ 993 ಎಂದು ನಿಗದಿಪಡಿಸುವುದು ವಾಡಿಕೆ. ಅದಕ್ಕೆ ಅಜಿತಪುರಾಣದ ಕಾಲ 933 ಎಂದು ಸ್ಪಷ್ಟವಾಗಿರುವುದೇ ಕಾರಣ. ಆದ್ದರಿಂದ ರನ್ನನ ಕಾಲಗಣನೆಯಲ್ಲಿ ತೈಲಪನ ಆಳ್ವಿಕೆಯ ಕಾಲ ಸಹಜವಾಗಿಯೇ ಗಮನಕ್ಕೆ ಬರುತ್ತದೆ. ಸತ್ಯಾಶ್ರಯನನ್ನು ಸಮೀಕರಿಸಿ ಗದಾಯುದ್ಧವನ್ನು ಬರೆದಿದ್ದರಿಂದ ಈ ಕಾವ್ಯದ ಕಾಲ ಸತ್ಯಾಶ್ರಯನ ಕಾಲಕ್ಕಿಂತ ಬೇರೆಯಾಗುವುದು ಸಾಧ್ಯವಿಲ್ಲ.

ಈ ಕಾರಣದಿಂದ ಗದಾಯುದ್ಧದ ಕಾಲವನ್ನು 1005 ಎಂದು ಗುರುತಿಸಲಾಗಿದೆ. ಕವಿ 1020 ರಲ್ಲಿ ತೀರಿಕೊಂಡಿರಬೇಕೆಂದು ಅಭಿಪ್ರಾಯವಿದೆ.

ರನ್ನನಿಗೆ ಕವಿರತ್ನ, ಕವಿಮುಖಚಂದ್ರ, ಕವಿಚಕ್ರವರ್ತಿ, ಕವಿರಾಜಶೇಖರ, ಕವಿಜನಶೇಖರ, ರತ್ನ, ಕವಿಚತುರ್ಮುಖ, ಉಭಯಕವಿ ಮೊದಲಾದ ಬಿರುದುಗಳಿವೆ.

ಉಭಯ ಕವಿ ಎಂದಿರುವುದರಿಂದ ಸಂಸ್ಕೃತದಲ್ಲಿಯೂ ಬರೆದಿರಬಹುದೆಂಬ ಅನುಮಾನ ಬರುವುದು ಸಹಜ. ಆದರೆ ಅದಕ್ಕೆ ಆಧಾರಗಳಿಲ್ಲ. ರನ್ನ ತನ್ನನ್ನು 'ಉಭಯ ವ್ಯಾಕರಣ ಪಂಡಿತ' ಎಂದು ಹೇಳಿಕೊಂಡಿರುವುದರಿಂದ, ಇವನಿಗೆ ವ್ಯಾಕರಣದಲ್ಲಿಯೂ ಪ್ರವೇಶವಿದ್ದಿರಬೇಕೆಂದು ತೋರುವುದು. ರನ್ನನು 'ರನ್ನಂ ವ್ಯಾಕರಣಂ' ಎಂದು ಹೇಳಿರುವುದರಿಂದ ಇದು ಮತ್ತಷ್ಟು ಬಲವಾಗುವುದು. ಈತ 'ರನ್ನ ನಿಘಂಟು' ರಚನೆಯ ಹಿನ್ನೆಲೆಯಲ್ಲಿ ನೋಡಿದರೆ ಇಂತಹ ಪ್ರಯೋಗವನ್ನು ಇವನು ಮಾಡಿರಲೂಬಹುದು. ಹೀಗೆ ಬೆಳೆದ ರನ್ನ ಚಕ್ರವರ್ತಿ ತೈಲಪನಲ್ಲಿ "ಯುದ್ಧಮಲ್ಲ' ಒಂದನ್ನು ರಚಿಸಿದ. ಅವನಿಂದ ಕವಿಚಕ್ರವರ್ತಿ ಎಂಬ ಬಿರುದನ್ನು ಗಳಿಸಿದ.

# * ರನ್ನನ ಕಾವ್ಯ




ರನ್ನ ತನ್ನ ಕಾವ್ಯದಲ್ಲಿ ವ್ಯಾಸ ವಾಲ್ಮೀಕಿಯರನ್ನು ಕಾಳಿದಾಸ ಬಾಣರನ್ನು ನೆನೆದಿದ್ದಾನೆ. ಗದಾಯುದ್ಧದ ಮೊದಲ ಪ್ರಾರಂಭದ ಭಾಗದ ಪಂಪ, ಬಾಣ, ಭಟ್ಟ, ನಾಗವರ್ಮರನ್ನು ನೆನೆಯದಿರುವುದು ಆಶ್ಚರ್ಯ. ಆದರೆ ಅಜಿತ ಪುರಾಣದಲ್ಲಿ ಪಂಪನ ಸ್ಮರಣೆಯಿದೆ. ಕವಿಗಳಲ್ಲಿ ಪ್ರಜ್ಞಾವಂತರೂ ಕೃತಿಕಾರರೂ ಹೊಗಳುಗರೂ ಆದವರು ನಾಲ್ವರೇ; ಕವಿತಾಗುಣಾರ್ಣವ ಮತ್ತು ಕವಿರತ್ನ ಎಂದು ಹೇಳುವಲ್ಲಿಯೂ ಪಂಪನ ಉಲ್ಲೇಖವಿದೆ. ನಾವು ತನ್ನ ಕಾವ್ಯಶಕ್ತಿಯ ಬಗ್ಗೆ ಪೂರ್ಣ ವಿಶ್ವಾಸವಿರುವ ಕವಿಯು ಹೌದು. ರನ್ನ ಬರೆದಿರುವ ಕೃತಿಗಳು ಐದು ಎಂಬ ಬಗ್ಗೆ ಚರ್ಚೆಯಿದೆ. ಕವಿಯೇ ಹೇಳಿರುವಂತೆ ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ, ಅಜಿತಪುರಾಣ, ರನ್ನಕಂದ- ಈ 5 ಕೃತಿಗಳನ್ನು ರಚಿಸಿರುವಂತೆ ತೋರುತ್ತದೆ.


## * ರನ್ನನ ಕೃತಿಗಳು

ರನ್ನನು ಹಲವಾರು ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಪ್ರಮುಖವಾದವುಗಳು ಇಂತಿವೆ.

### ① ಅಜಿತತೀರ್ಥಂಕರ ಪುರಾಣ ತಿಲಕಂ


ಈ ಕೃತಿಯನ್ನು ರನ್ನನು ರಚಿಸಿದ್ದನು. ಈ ಕೃತಿಯು ಒಂದು ಪುರಾಣ ಚಂಪೂಕಾವ್ಯ. ಇದರಲ್ಲಿ 12 ಆಶ್ವಾಸಗಳು ಇವೆ. ಅಜಿತ ಸ್ವಾಮಿಯ ಸಗರರಾಜ ರ ಪಾತ್ರಗಳಿವೆ. ಇದರಲ್ಲಿ ಅತ್ತಿಮಬ್ಬೆ ಹೋಲಿಸಿದಳು. ಇದರ ಕಥಾವಸ್ತು ಅಜಿತನಾಥನ ಕತೆಯ ಜೊತೆಗೆ ಸಗರ ಚಕ್ರವರ್ತಿಯ ಕತೆ, ಸಗರನ ಮಕ್ಕಳ ಮರಣ, ಭಗೀರಥ ಪ್ರಯತ್ನ, ಗಂಗಾವತರಣದ ಕತೆಗಳು ಇದರಲ್ಲಿವೆ. ಧರ್ಮಾವಳಿಯ ಬಂಧವಿಲ್ಲ, ಅಲ್ಲಲ್ಲಿ ವರ್ಣನೆಗಳಿವೆ. ಇದು ರನ್ನನ ಧರ್ಮ ಪ್ರವೃತ್ತಿ ಪ್ರತೀಕವಾದ ಕೃತಿ.


## * ರನ್ನನ ಬರಹ



② ಗದಾಯುದ್ಧಂ (ಸಾಹಸಭೀಮ ವಿಜಯಂ).

ಇದು ರನ್ನನ ಪ್ರಮುಖ ಕೃತಿ. ಇದರಲ್ಲಿ 10 ಆಶ್ವಾಸಗಳು ಇವೆ. ಭೀಮ, ದುರ್ಯೋಧನ, ಅರ್ಜುನ, ಕೃಷ್ಣ, ದ್ರೌಪದಿ, ಧರ್ಮರಾಯರು ಇದರಲ್ಲಿನ ಪಾತ್ರಗಳು.




ಭಾಸನ - ಊರುಭಂಗ, ಭಟ್ಟನಾರಾಯಣನ ವೇಣೀಸಂಹಾರ, ಪಂಪ ಭಾರತದ 12ನೆಯ ಆಶ್ವಾಸ, ವ್ಯಾಸ ಭಾರತದ ಗದಾ ಪರ್ವ, ಸೌಪ್ತಿಕ ಪರ್ವಗಳಿವೆ. 18ನೇ ದಿವಸದ ಯುದ್ಧವೇ ಪ್ರಧಾನ ವಸ್ತುವಾದರೂ ಪ್ರಾಸಂಗಿಕವಾಗಿ ಸಮಸ್ತ ಭಾರತ ನಿರೂಪಿಸಿದ ಕೃತಿ.

* ಇತರ ಕೃತಿಗಳು

③ ಚಕ್ರೇಶ್ವರ ಚರಿತೆ → ಅನುಪಲಬ್ಧ ಕೃತಿ.

④ ಪರಶುರಾಮ ಚರಿತೆ → ಅನುಪಲಬ್ಧ ಕೃತಿ.

⑤ ರನ್ನಕಂದ ನಿಘಂಟು → 1/2 ಭಾಗ ಮಾತ್ರ.

Principal,
G. P. Porwal Arts, Comm &
V. V. Salimath Sc. Coll...
SINDGI-586128

## ③ ಪೊನ್ನ – ಕವಿಪರಿಚಯ

* ಪೊನ್ನ (ಜೈನ) – (950).

ಪೊನ್ನನು ಹಳೆಗನ್ನಡದ ಮೂವರು ರತ್ನತ್ರಯರಲ್ಲಿ ಒಬ್ಬನು. ಪೊನ್ನನು ಕ್ರಿ.ಶ 950ರಲ್ಲಿ ವೆಂಗಿಮಂಡಲದ ವೆಂಗಿಪಳು ಎಂಬಲ್ಲಿ ಜನಿಸಿದನು. ಇವನಿಗೆ ಹಲವಾರು ಹೆಸರುಗಳಿವೆ. ಪೊನ್ನಿಗ, ಸವಣ, ಕುರುಳ್ಗಳ ಮುಂತಾದವು. ಈತನು ರಾಷ್ಟ್ರಕೂಟ ಚಕ್ರವರ್ತಿ 2ನೇಯ ಕೃಷ್ಣನ ಆಸ್ಥಾನದಲ್ಲಿ ಪೊನ್ನನು ಕವಿಯಾಗಿದ್ದನು. ಕನ್ನಡ ಹಾಗೂ ಸಂಸ್ಕೃತ ಗಳಲ್ಲಿ ಇವನಿಗೆ ಅಪಾರ ಪಾಂಡಿತ್ಯವಿದ್ದುದರಿಂದ ಈತನಿಗೆ ಉಭಯ ಕವಿಚಕ್ರವರ್ತಿ ಎಂದು ಕರೆಯಲಾಗುತ್ತಿತ್ತು. ಈತನು ತನ್ನನ್ನು "ಕುರುಳ್ಗಳ ಸವಣ" ಎಂದು ಕರೆದುಕೊಂಡಿದ್ದಾನೆ. ಆದುದರಿಂದ ಈತನು ಜೈನ ಸನ್ಯಾಸಿಯಂತೆ ಇದ್ದನೆಂದು ಭಾವಿಸಬಹುದು.

ರತ್ನತ್ರಯರು, ಕವಿಚಕ್ರವರ್ತಿ, ಉಭಯಕವಿ, ಸರ್ವದೇವ ಕವೀಂದ್ರ, ಸೌಜನ್ಯ ಕಂದಾರಠಕುರ ಎಂಬ ಹಲವು ಬಿರುದುಗಳು ಪೊನ್ನನಿಗೆ ಇದ್ದವು. ಕಾಳಿದಾಸ ಮತ್ತು ಅಸಗ ಸ್ಮರಣೆ ಆಗಿವೆ.


ಈತನನ್ನು ಮಹೋನ್ನತಿಯೆತ್ತಂ ಬೆಡಂಗು ಪೊನ್ನನ ಕವಿತಾಗುಣಾರ್ಣವಂ, ಪೊನ್ನಂ ಪ್ರಿಯದಿಂದ ಪೇಳ್ದ ಚಿತ್ತಂ, ಪೊನ್ನಮಯ್ಯನ ಬೆಡಂಗು, ಪೊನ್ನನ ಬಿನ್ನಣದ ನುಡಿ, ಪೊನ್ನನ ಬಗೆ, ಪೊನ್ನನ ಪೊಸ ನುಡಿ, ಪೊನ್ನನ ನೆಗಳ್ತೆ, ಪೊನ್ನನೊಳ್ ಸನ್ನದ ನಗದ ನಾಣ್ಣುಡಿ.

## * ಪೊನ್ನನ ಕೃತಿಗಳು

ಪೊನ್ನನು ಹಲವಾರು ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ 4 ಕೃತಿಗಳು ಪ್ರಮುಖ. ಅವುಗಳು ಇಂತಿವೆ.

(1) ಶಾಂತಿ ಪುರಾಣ
(2) ಜಿನಾಕ್ಷರ ಮಾಲೆ
(3) ಭುವನೈಕ ರಾಮಾಭ್ಯುದಯ
(4) ಗತಪ್ರತ್ಯಾಗತ.

### (1) ಶಾಂತಿ ಪುರಾಣ




ಶಾಂತಿ ಪುರಾಣ ಕೃತಿಯು ಪೊನ್ನನ ಪ್ರಮುಖ ಕೃತಿಯಾಗಿದೆ. ಈ ಕಾವ್ಯ ಬರೆಸಿದವರು ಪುಂಗನೂರಿನ ನಾಗಮಯ್ಯನಿಗೆ ಮಕ್ಕಳಾದ ಮಲ್ಲಪಯ್ಯ ಮತ್ತು ಪುನ್ನಮಯ್ಯ. ಇದಕ್ಕೆ "ಪುರಾಣ ನಾಮ ಚೂಡಾಮಣಿ" ಎಂಬ ಪರ್ಯಾಯನಾಮವಿದೆ. 12 ಆಶ್ವಾಸಗಳಲ್ಲಿ ರಚಿತವಾಗಿರುವ ಈ ಚಂಪೂ ಕಾವ್ಯ 16ನೆಯ ತೀರ್ಥಂಕರನಾದ ಶಾಂತಿನಾಥನನ್ನು ಕುರಿತದ್ದು. ಈ ಕಾವ್ಯದಲ್ಲಿ ಪೊನ್ನನ ವಿದ್ವತ್ತು, ಪ್ರೌಢಿಮೆ, ಭಾಷೆ, ಛಂದಸ್ಸುಗಳ ಮೇಲೆ ಇರುವ ಹಿಡಿತ ಎದ್ದು ಕಾಣುತ್ತದೆ.

## ② ಭುವನೈಕ ರಾಮಾಭ್ಯುದಯ

ಇದು ಪೊನ್ನನ 2ನೇ ಪ್ರಮುಖ ಕೃತಿ. ಇದು 14 ಆಶ್ವಾಸಗಳ ಚಂಪೂ ಕಾವ್ಯ. ಈ ಗ್ರಂಥವು ಲಭ್ಯವಿಲ್ಲವಾದ್ದರಿಂದ ಇದರ ಕಥಾವಸ್ತು ಚಕ್ರವರ್ತಿ ಕೃಷ್ಣನ ಸಾಮಂತರಾಜ ಶಂಕರಗಂಡನ ಕುರಿತುದೋ, ಅಥವಾ ರಾಮಕಥೆಯನ್ನು ಕುರಿತುದೋ, ಇಲ್ಲವೇ ತನ್ನನ್ನು "ಕೋದಂಡರಾಮ" ನೆಂದು ಕರೆದುಕೊಳ್ಳುತ್ತಿದ್ದ ಚೋಳರಾಜ ರಾಜಾದಿತ್ಯನ ಮೇಲೆ ಮುಮ್ಮಡಿಕೃಷ್ಣ ತೆರಳಿದುದಲ್ಲಿ ವಿಜಯವು ಸಾಧಿಸಿದ ಕಥೆಯೋ ಎಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಮಲ್ಲಪನ ಮಗಳಾದ "ದಾನಚಿಂತಾಮಣಿ" ಅತ್ತಿಮಬ್ಬೆಯು ಈ ಕೃತಿಯ ಸಾವಿರ ಪ್ರತಿಗಳನ್ನು ಮಾಡಿಸಿ, ಧರ್ಮಶ್ರದ್ಧೆಯುಳ್ಳವರಿಗೆ ಹಂಚಿದಳಂತೆ.

## ③ ಜಿನಾಕ್ಷರ ಮಾಲೆ

ಇದು ಜೈನ ಧರ್ಮದ ಶ್ಲೋಕಗಳನ್ನು ಕಥಾವಸ್ತುಗಳಾಗಿ ಒಳಗೊಂಡಿದೆ. ಇಲ್ಲಿ ಛಂದಸ್ಸುಗಳು ಕಂಡುಬರುತ್ತವೆ. "ಅ ದಿಂದ ಳ" ಕಾರದ ವರೆಗೆ ಪ್ರತಿ ಅಕ್ಷರಕ್ಕೊಂದರಂತೆ 39 ಕಂದ ಪದ್ಯಗಳಿವೆ.

## ④ ಗತ ಪ್ರತ್ಯಾಗತ

— ಅನುಪಲಬ್ಧ ಕೃತಿ.

# * ಪೊನ್ನನ 'ಶಾಂತಿನಾಥ ಪುರಾಣ'ದ ಪಂಕ್ತಿಗಳು.

* ಸಕ್ಕದದೊಳ್ ಮುನ್ನಿಳ್ಳ ಕಾಳಿದಾಸಂಗನ್ನಬುದಿ
ರಚನೆಯೊಳ್ ಕರುಳ್ಳಳ್ ಸಲುವರಂ.

* ಜುಂಬಾರಿ ವಿಕೃತ ಮಾಡುವ ರಂಭಾ ನಟಿಯಂತೆ.

* ಆಕೋಲಾಹನ ನುಡಿಗಳ್ ಪ್ರತಿಧ್ವನಿಪ್ರೊಲ್; ನುಡಿನ
ನುಡಿಗೆ ಸಮನಾದವುವೇ?

* ಉತ್ತಮ ವನಿತಾ ವದನೋಪಾತ್ತ ರಸಾಯನದೊಳ್
ಧರದೊಳ್.

* ಶೃಂಗಾರ ಚೇಷ್ಟೆಗಳ್ ವಿವಿಧಂಗಳ್ ನೆಗಳ್ವುವು.

* ಪಂಚೇಂದ್ರಿಯ ವಿಷಯಂಗಳುಮತಿ ಪ್ರಿಯಂ
ಸಂತತಂ.

* ಮಗಳಕ್ಕಂ ತಂದೆ ತಾಯ್ವಾರಿನಿ ಸೊಗಸೆ ಬಂದವಳ್
ಪ್ಪು ಮುತ್ತಪ್ಪು ಮತ್ತಿಗೆ. ಕೂನಿತ್ತಿತ್ತಯಂಬಿ
ಮೋರೆಯ ವನಿತೆಯರ್.

* ನಂಚಿನೊಳಗಿಡಿದ ಕಂಬುಮನೊಂಬುಲಿಸಿದ
ಮಧುಪನಂತೆ.

## * ಇತರ ಗ್ರಂಥ

| ಕ್ರ.ಸಂ | ಪುಸ್ತಕದ ಹೆಸರು | ಬರೆದವರು. |
|---|---|---|
| 1) | ಹಳೆಗನ್ನಡ ಸಾಹಿತ್ಯ ಚಂದ್ರಿಕೆ. | ಡಾ\|\| ಹಾಮ್. ನಾಯಕ್. -ಲೇಖಕನವರು. |
| 2) | ಕನ್ನಡ ಸಾಹಿತ್ಯದ -ಇತಿಹಾಸ | ರಂ. ಶ್ರೀ. ಮುಗಳಿ. |
| 3) | ಬಾಲತಂಡದಿಂದ. | — |

SSM

Coordinator IQAC
G. P. PORWAL ARTS, COM &
V. V. SALIMATH Sc. College
SINDGI-586128.

Principal,
G. P. Porwal Arts, Comm &
V. V. Salimath Sc. College
SINDGI-586128. College Code: 5234